ದಿನಾಂಕ 27-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುಗಾರರ ಪರ ಶ್ರೀ ಸಿ.ಪಿ.ಜೆ ವಕೀಲರಿಂದಃ**

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಎದುರುಗಾರ-ನೊಂದಿಗೆ ಮದುವೆ ಆದ 15 ದಿನಗಳಲ್ಲಿ ಆತನ ಮನೆಗೆ ವೈವಾಹಿಕ ಜೀವನವನ್ನು ನಡೆಸಲು ಹೋಗಿರುತ್ತೇನೆ. ನನ್ನ ಮತ್ತು ಎದುರುಗಾರನ ಮದುವೆಯು ದಿಃ 13-05-2021 ರಂದು ಶಿಕಾರಿಪುರ ತಾಲೂಕಿನ ಕೊಳಗಿ ಗ್ರಾಮದ ಎದುರುಗಾರರ ಮನೆಯ ಮುಂದೆ ಆಗಿರುತ್ತದೆ ಎಂದರೆ ಸರಿ. ಸದರಿ ಮದುವೆ ಆದ ಮಾರನೇಯ ದಿನ ತವರು ಮನೆಗೆ ನಾನು ಮತ್ತು ಎದುರುಗಾರರು ಹೋಗಿರುತ್ತೇವೆ. ಮದುವೆ ಆದ ನಂತರ ಗಂಡನ ಮನೆಗೆ ಹೋದಾಗ ಸುಮಾರು 3 ತಿಂಗಳ ಒಳಗೆ ಜೀವನ ಮಾಡಿರುತ್ತೇನೆ. ನಾನು ಮದುವೆ ಆಗಿ ಎದುರುಗಾರನ ಮನೆಗೆ ಹೋದ ನಂತರ 8 ದಿನಗಳವರೆಗೆ ಮಾತ್ರ ಆತನೊಂದಿಗೆ ಸಾಂಸಾರಿಕ ಜೀವನ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ 8 ದಿನಗಳ ಅವಧಿಯಲ್ಲಿ ಎದುರುಗಾರನೊಂದಿಗೆ ಸರಿಯಾಗಿ ಸಾಂಸಾರಿಕ ಜೀವನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ 8 ದಿನಗಳ ಅವಧಿಯಲ್ಲಿ ಎದುರುಗಾರನು ತನ್ನೊಂದಿಗೆ ಉತ್ತಮ ಬಾಂಧವ್ಯ ಹೊಂದಿ ಜೀವನ ನಡೆಸುವಂತೆ ತಿಳುವಳಿಕೆ ಹೇಳಿದ್ದರೂ ಸಹ ನಾನು ಆತನಿಗೆ ಸಾಕಷ್ಟು ಮಾನಸಿಕ ಕಿರುಕುಳ ನೀಡಿದ್ದೆ ಎಂದರೆ ಸರಿಯಲ್ಲ.

2. ಸದರಿ 8 ದಿನದ ಅವಧಿಯಲ್ಲಿ ನಾನು ನಿದ್ದೆ ಮಾತ್ರೆಗಳನ್ನು ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಎದುರುಗಾರನಿಗೆ ಹೆದರಿಸಿ ಕಿರುಕುಳ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ 8 ದಿನಗಳು ಕಳೆದ ನಂತರ ನಾನು ಎದುರುಗಾರನಿಗೆ ಮಾಹಿತಿ ತಿಳಿಸದೇ ತವರು ಮನೆಗೆ ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಮಾತ್ರೆಗಳನ್ನು ತೆಗೆದುಕೊಂಡು ಎದುರುಗಾರನಿಗೆ ಹೆದರಿಸಿದ್ದು ಅಲ್ಲದೇ ಸಾಂಸಾರಿಕ ಜೀವನ ಮಾಡದೇ ತವರು ಮನೆಗೆ ಹೇಳದೇ ಕೇಳದೇ

ಹೋಗಿದ್ದರಿಂದ ಎದುರುಗಾರನು ನನ್ನ ವಿರುದ್ಧ ಶಿರಾಳಕೊಪ್ಪ ಪೊಲೀಸ್ ಠಾಣೆಯಲ್ಲಿ ಪಿರ್ಯಾದನ್ನು ದಾಖಲಿಸಿದ್ದ ಎಂದರೆ ಸರಿಯಲ್ಲ. ಸದರಿ ಪಿರ್ಯಾದಿಯ ಆಧಾರದ ಮೇಲೆ ಶಿರಾಳಕೊಪ್ಪ ಪೊಲೀಸ್ ಠಾಣೆಯ ಪೊಲೀಸ್ ಸಿಬ್ಬಂದಿಗಳು ನನ್ನನ್ನು ಮತ್ತು ಎದುರುಗಾರನನ್ನು ಕರೆಯಿಸಿ ಬುದ್ಧಿವಾದ ಹೇಳಿದ್ದರು ಎಂದರೆ ಸಾಕ್ಷಿಯು ಸದರಿ ಪಿರ್ಯಾದನ್ನು ನಾನು ಸಲ್ಲಿಸಿದ್ದು ಅದರ ಆಧಾರದ ಮೇಲೆ ಪೊಲೀಸರು ನಮ್ಮಿಬ್ಬರನ್ನು ಕರೆಸಿದ್ದರು ಎಂದು ನುಡಿಯುತ್ತಾರೆ. ಸದರಿ ಪಿರ್ಯಾದಿನಲ್ಲಿ ಪೊಲೀಸರು ನನಗೆ ಮತ್ತು ಎದುರುಗಾರನಿಗೆ ಒಳ್ಳೇಯ ಬಾಂಧವ್ಯದಿಂದ ಸಾಂಸಾರಿಕ ಜೀವನ ಮುಂದುವರೆಸುವಂತೆ ಬುದ್ಧಿವಾದ ಹೇಳಿದ್ದರು ಎಂದರೆ ಸರಿ.

3. ಪೊಲೀಸರು ಬುದ್ಧಿವಾದ ಹೇಳಿದರೂ ನಾನು ಎದುರುಗಾರನ ಮನೆಗೆ ಹೋಗದೇ ಅಲ್ಲಿಂದಲೇ ತವರು ಮನೆಗೆ ಹೋಗಿದ್ದೆ ಎಂದರೆ ಸಾಕ್ಷಿಯು ಎದುರುಗಾರನ ಮನೆಗೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಪೊಲೀಸ್ ಠಾಣೆಯಿಂದ ಎದುರುಗಾರನ ಮನೆಗೆ ಹೋಗಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ರಾಜೀ ಆದ ದಿನದಿಂದಲೂ ಎದುರುಗಾರನ ಮನೆಗೆ ಆತನೊಂದಿಗೆ ಸಾಂಸಾರಿಕ ಜೀವನ ನಡೆಸಲು ಹೋಗಿರುವುದಿಲ್ಲ ಮತ್ತು ಇಂದಿಗೂ ಸಹ ಎದುರುಗಾರನ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಎದುರುಗಾರನೊಂದಿಗೆ ಸಾಂಸಾರಿಕ ಜೀವನ ಮುಂದುವರೆಸಲು ಸೇರಿಕೊಳ್ಳದೇ ಇದ್ದ ಕಾರಣಕ್ಕೆ, ಕಡೆಗೆ ಎದುರುಗಾರನು ದಾಂಪತ್ಯ ಸಂಬಂಧದ ಪುನರ್ ಸ್ಥಾಪನೆಗಾಗಿ ವಕೀಲರ ಮೂಲಕ ನನಗೆ ನೋಟೀಸನು ಜಾರಿ ಮಾಡಿದ್ದನು ಎಂದರೆ ಸರಿ. ಸದರಿ ನೋಟೀಸು ಬಂದ ನಂತರ ನಾನು ಎದುರುಗಾರನ ಮನೆಗೆ ಸಾಂಸಾರಿಕ ಜೀವನ ಮುಂದುವರೆಸಲು ಹೋಗಿರುವುದಿಲ್ಲ ಎಂದರೆ ಸರಿ. ಸದರಿ ನೋಟೀಸಿಗೆ ನಾನು ಪ್ರತ್ಯುತ್ತರವನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಎದುರುಗಾರನು ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

4. ನಾನು ನೋಟೀಸನ್ನು ತೆಗೆದುಕೊಂಡರೂ ಅದಕ್ಕೆ ಯಾವುದೇ ಪ್ರತ್ಯುತ್ತರ ನೀಡದೇ ಮತ್ತು ಎದುರುಗಾರನೊಂದಿಗೆ ಸಾಂಸಾರಿಕ ಜೀವನ ಮುಂದುವರೆಸದೇ ಇದ್ದ ಕಾರಣಕ್ಕೆ ಎದುರುಗಾರನು ಶಿಕಾರಿಪುರದ ನ್ಯಾಯಾಲಯದಲ್ಲಿ ದಾಂಪತ್ಯ ಜೀವನ ಮರುಸ್ಥಾಪನೆ ಕೋರಿ ಎಂ.ಸಿ ಸಂಃ 32/2022 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನ್ಯಾಯಾಲಯವು ನೀಡಿದ ನೋಟೀಸು ನನಗೆ ಜಾರಿ ಆಗಿತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನೋಟೀಸು ಜಾರಿ ಆದರೂ ನಾನು ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಪ್ರಕರಣವನ್ನು ನಡೆಸಲು ಹಾಜರಾಗದೇ ಇದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸದರಿ ಪ್ರಕರಣದಲ್ಲಿ ನ್ಯಾಯಾಲಯವು ಎದುರುಗಾರನೊಂದಿಗೆ ಆದೇಶ ಆದ ಒಂದು ತಿಂಗಳ ಒಳಗಾಗಿ ದಾಂಪತ್ಯ ಜೀವನ ಮುಂದವರೆಸಲು ಸೇರಿಕೊಳ್ಳಬೇಕೆಂದು ಆದೇಶ ಆಗಿತ್ತು ಎಂದರೆ ಸರಿಯಲ್ಲ. ಎದುರುಗಾರನು ಯಾವಾಗಲೂ ಮತ್ತು ಇಂದಿಗೂ ಸಹ ನನ್ನೊಂದಿಗೆ ಸುಖಸಂಸಾರವನ್ನು ಮುಂದುವರೆಸಲು ನನ್ನ ಬರುವಿಕೆಗಾಗಿ ಕಾಯುತ್ತಿದ್ದಾನೆ ಎಂದರೆ ಸರಿಯಲ್ಲ.

6. ಎದುರುಗಾರನೊಂದಿಗೆ ಆತನ ಮನೆಯಲ್ಲಿ ತಂದೆ, ತಾಯಿ ಮತ್ತು ಸಹೋದರಿಯರು ಇರುತ್ತಾರೆ. ಎದರುಗಾರನೊಂದಿಗೆ ತಂದೆ, ತಾಯಿ ಮಾತ್ರ ಇದ್ದು ಆತನ ಸಹೋದರಿಯರು ಮದುವೆ ಆಗಿ ಅವರವರ ಗಂಡನ ಮನೆಯಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿಯು ನಾನು ಎದುರುಗಾರನ ಮನೆಯಲ್ಲಿ 3 ತಿಂಗಳವರೆಗೆ ಮಾತ್ರ ಇದ್ದ ಕಾರಣಕ್ಕೆ ಅದರ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅತ್ತೆಯನ್ನು ನೋಡಿಕೊಳ್ಳುವ ಸಾಮಾನ್ಯ ಜವಾಬ್ದಾರಿ ಸೊಸೆಯದು ಇರುತ್ತದೆ ಎಂದರೆ ಸರಿ. ನನ್ನ ಅತ್ತೆ ಮತ್ತು ಮಾವನಿಗೆ ಎಷ್ಟು ವಯಸ್ಸು ಎಂದು ಗೊತ್ತಿಲ್ಲ. ಅವರು ವಯೋವೃದ್ದರು ಇರುವುದರಿಂದ ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ಎದುರುಗಾರ ಮತ್ತು ನನ್ನದು ಇರುತ್ತದೆ ಎಂದರೆ

ಸರಿ. ನಾನು ವೈಯಕ್ತಿಕವಾಗಿ ಎದುರುಗಾರ ಮತ್ತು ಆತನ ಪೋಷಕರನ್ನು ನಿರ್ಲಕ್ಷಿಸಿ ಆತನೊಂದಿಗೆ ಸಾಂಸಾರಿಕ ಜೀವನ ಮಾಡದೇ ತವರು ಮನೆಗೆ ಬಿಟ್ಟು ಬಂದಿರುವುದರಿಂದ ಮತ್ತು ನ್ಯಾಯಾಲಯದಲ್ಲಿ ಆತನೊಂದಿಗೆ ಸಾಂಸಾರಿಕ ಜೀವನ ಮುಂದುವರೆಸುವಂತೆ ಆದೇಶ ಆಗಿದ್ದರೂ ಎದುರುಗಾರನ ಜೊತೆ ಸೇರಿಕೊಳ್ಳದೇ ಇರುವುದರಿಂದ, ಜೀವನಾಂಶವನ್ನು ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ. ಎದುರುಗಾರನು ನ್ಯಾಯಾಲಯದ ಮುಂದೆ ತಾನು ನನಗೆ ಯಾವುದೇ ತೊಂದರೆಯನ್ನು ನೀಡಿರುವುದಿಲ್ಲ ಎಂದು ಒಪ್ಪಿಕೊಂಡು ರಾಜೀ ಅರ್ಜಿ ಸಲ್ಲಿಸಲು ತಯಾರಿದ್ದು, ಆತನೊಂದಿಗೆ ನನಗೆ ಸಂಸಾರ ಮಾಡಲು ತೊಂದರೆ ಇದೆಯಾ ಎಂಬ ಸೂಚನೆಗೆ ಸಾಕ್ಷಿಯು ಎದುರುಗಾರನು ನನಗೆ ಸಾಕಷ್ಟು ಹಿಂಸೆಗಳನ್ನು ಮಾಡುವುದರಿಂದ ಹೋಗಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ

ಸಾಕ್ಷಿದಾರರ ಸಹಿ